# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | : | 647 (863) |
| ಸದಸ್ಯರ ಹೆಸರು | : | ಶ್ರೀ ಚಿದಾನಂದ್ ಎಂ ಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 16/12/2024. |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು . |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಖಾಸಗಿ ಶಾಲೆಗಳಿಗೆ ಅನುದಾನ ನೀಡುವುದು ಯಾವ ವರ್ಷದಿಂದ ಜಾರಿಗೆ ಬಂದಿದ್ದು; ಇದಕ್ಕೆ ಹಾಲಿ ಇರುವ ನಿಯಮಗಳೇನು; | ಸರ್ಕಾರದ ಆದೇಶ ಸಂಖ್ಯೆ:ಇಡಿ 05 ಡಿಇಐ 60, ದಿನಾಂಕ:31.01.1962ರಲ್ಲಿ ರಾಜ್ಯ ಪ್ರೌಢಶಾಲಾ ಸಂಹಿತೆಯನ್ನು ಜಾರಿಗೆ ತರಲಾಗಿದೆ.<br>ಸದರಿ ಸಹಾಯಾನುದಾನ ಸಂಹಿತೆ ಜಾರಿಗೆ ಬಂದ ನಂತರ ಪ್ರಾರಂಭವಾದ ಹೊಸ ಖಾಸಗಿ ಶಾಲೆಗಳಿಗೆ ದಿನಾಂಕ:01.04.1963ರಿಂದ ಅನುದಾನ ನೀಡುವ ಯೋಜನೆ ಪ್ರಾರಂಭಿಸಲಾಯಿತು. ಪ್ರಸ್ತುತ ಸದರಿ ಯೋಜನೆಯನ್ನು ಕರ್ನಾಟಕ ಶಿಕ್ಷಣ ಕಾಯ್ದೆ-1983ರ ಸೆಕ್ಷನ್-49ರನ್ವಯ ಸರ್ಕಾರದ ಹಣಕಾಸಿನ ಲಭ್ಯತೆಗೊಳಪಟ್ಟು ಕೆಳಕಂಡಂತೆ ಅನುಷ್ಠಾನಗೊಳಿಸಲಾಗುತ್ತಿದೆ.<br>• ಸರ್ಕಾರದ ಆದೇಶ ಸಂಖ್ಯೆ: ಇಡಿ 65 ವಿವಿದ 97, ದಿನಾಂಕ:13-09-2002 ಹಾಗೂ ಸರ್ಕಾರದ ಆದೇಶ ಸಂಖ್ಯೆ:ಇಡಿ 59 ಪಿಎಂಸಿ 2006, ದಿನಾಂಕ:06-10-2007ರನ್ವಯ ದಿನಾಂಕ:01-06-1987 ರಿಂದ 1992-93ರ ಅವಧಿಗೆ ಪ್ರಾರಂಭಿಸಿ ಅವಿಚಿನ್ನವಾಗಿ ನಡೆಯುತ್ತಿರುವ ಖಾಸಗಿ ಅನುದಾನರಹಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಅನುದಾನಕ್ಕೊಳಪಡಿಸಲಾಗುತ್ತಿದೆ.<br>• ಸರ್ಕಾರದ ಆದೇಶ ಸಂಖ್ಯೆ:ಇಡಿ 217 ಪಿಎಂಸಿ 2008 ದಿನಾಂಕ:08-09-2008 ರನ್ವಯ 1993-94 ರಿಂದ 1994-95 ರ ಅವಧಿಗೆ ಪ್ರಾರಂಭಿಸಿ ಅವಿಚ್ಛಿನ್ನವಾಗಿ ನಡೆಯುತ್ತಿರುವ ಖಾಸಗಿ ಅನುದಾನರಹಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳನ್ನು ಅನುದಾನ ಕ್ಕೊಳಪಡಿಸಲಾಗುತ್ತಿದೆ. |
| ಆ) | ಸರ್ಕಾರಿ ಶಾಲೆಗಳಲ್ಲಿ ಕನ್ನಡ ಮಾಧ್ಯಮದ ಜೊತೆ ಆಂಗ್ಲ ಮಾಧ್ಯಮ ನಡೆಸಲು ಅವಕಾಶ ವಿದೆಯೇ; ಇದ್ದಲ್ಲಿ ಯಾವ ನಿಯಮ / ಆದೇಶದ ಅಡಿಯಲ್ಲಿ ನೀಡಲಾಗಿದೆ; (ಆದೇಶದ ಪ್ರತಿಯನ್ನು ನೀಡುವುದು) | ಸರ್ಕಾರಿ ಶಾಲೆಗಳಲ್ಲಿ ಕನ್ನಡ ಮಾಧ್ಯಮದ ಜೊತೆ ಆಂಗ್ಲ ಮಾಧ್ಯಮ ನಡೆಸಲು ಸುತ್ತೋಲೆ ಸಂಖ್ಯೆ:ಸಿ4[5]:ಪ್ರೌ.ಶಿ:ಹೆ.ಅಂ.ಅನು:80:2018-19, ದಿ:13.03.2019 ರನ್ವಯ ಅವಕಾಶ ಕಲ್ಪಿಸಲಾಗಿದೆ. [ಸುತ್ತೋಲೆ ಪ್ರತಿ ಲಗತ್ತಿಸಿದೆ] |

| | | |
|---|---|---|
| ಇ) | ಖಾಸಗಿ ಅನುದಾನಿತ ಶಾಲೆಗಳಲ್ಲಿ ಕನ್ನಡ ಮಾಧ್ಯಮದ ಜೊತೆಗೆ ಆಂಗ್ಲ ಮಾಧ್ಯಮ ತರಗತಿಗಳನ್ನು ಅನುದಾನ ರಹಿತವಾಗಿ ತೆರೆಯಲು/ನಡೆಸಲು ಅವಕಾಶವಿದೆಯೇ; ಇಲ್ಲದಿದ್ದಲ್ಲಿ ಕಾರಣವೇನು; | ಖಾಸಗಿ ಅನುದಾನಿತ ಶಾಲೆಗಳಲ್ಲಿ ಕನ್ನಡ ಮಾಧ್ಯಮದ ಜೊತೆಗೆ ಆಂಗ್ಲ ಮಾಧ್ಯಮ ತರಗತಿಗಳನ್ನು ಅನುದಾನರಹಿತವಾಗಿ ತೆರೆಯಲು / ನಡೆಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.<br><br>ಖಾಸಗಿ ಅನುದಾನಿತ ಶಾಲೆಗಳು ನಡೆಯುತ್ತಿರುವ ಆವರಣದಲ್ಲಿ ಪ್ರತ್ಯೇಕ ತರಗತಿಗಳನ್ನು ಅನುದಾನ ರಹಿತವಾಗಿ ತೆರೆದು ನಡೆಸಲು ಅವಕಾಶವಿರುವುದಿಲ್ಲ.<br><br>ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 709 ಪಿಜಿಸಿ 2017 ದಿನಾಂಕ:07.03.2018ರಲ್ಲಿ ಒಂದೇ ಆವರಣದಲ್ಲಿ ನಡೆಯುತ್ತಿರುವ ಶಾಲೆಗಳ ಡೈಸ್ ವಿಲೀನ ಕುರಿತಂತೆ ಒಂದು ಆವರಣದಲ್ಲಿ ಒಂದೇ ನೋಂದಣಿಯನ್ನು ಪಡೆಯಲು ಅವಕಾಶವಿರುತ್ತದೆ. ಆದ ಕಾರಣ ಒಂದೇ ಆವರಣದಲ್ಲಿ ಎರಡು ಪ್ರತ್ಯೇಕ ಮಾಧ್ಯಮ/ ತರಗತಿಗಳನ್ನು ಅನುದಾನ ರಹಿತ ಮತ್ತು ಅನುದಾನ ಸಹಿತವಾಗಿ ನಡೆಸಲು ಅವಕಾಶವಿರುವುದಿಲ್ಲ.<br><br>ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 709 ಪಿಜಿಸಿ 2017 ದಿನಾಂಕ:07.03.2018ರಲ್ಲಿ ಆದೇಶಿಸಿರುವಂತೆ ಹೊಸ ಶಾಲೆಗಳ ನೋಂದಣಿ ಅನುಮತಿಗೆ ನಿಗದಿಪಡಿಸಿದ ನಿವೇಶನ /ಶಾಲಾ ಜಮೀನು /ಮೂಲಭೂತ ಸೌಲಭ್ಯ ಹೊಂದಿದ್ದಲ್ಲಿ ನೋಂದಣಿ ಅನುಮತಿಗೆ ಅರ್ಜಿ ಸಲ್ಲಿಸಿ ಅನುದಾನ ರಹಿತವಾಗಿ ಪ್ರತ್ಯೇಕ ಮಾಧ್ಯಮ ಮತ್ತು ತರಗತಿಗಳನ್ನು ಪ್ರಾರಂಭಿಸಲು ಅನುಮತಿ ಪಡೆದು ನಡೆಸಬಹುದಾಗಿರುತ್ತದೆ. |
| ಈ) | ಖಾಸಗಿ ಅನುದಾನಿತ ಶಾಲೆಗಳಲ್ಲಿ ರಾಜ್ಯಾದ್ಯಂತ ಹಲವು ಶಾಲೆಗಳಿಗೆ ಹತ್ತಾರು ಎಕರೆ ಮತ್ತು ಜಮೀನು ಸೌಲಭ್ಯವಿದ್ದರೂ ವಿದ್ಯಾರ್ಥಿಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ರೀತಿ ಖಾಸಗಿ ಅನುದಾನಿತ ಶಾಲೆಗಳ ಆಡಳಿತ ಮಂಡಳಿಗೆ ಅನುಮತಿ ನೀಡಿದರೆ ಆಂಗ್ಲ ಮಾಧ್ಯಮ ತೆರೆಯಲು ಅನುಮತಿ ನೀಡಲು ಸರ್ಕಾರಕ್ಕೆ ಇರುವ ಆಡೆತಡೆಗಳೇನು; | ಅನುದಾನಿತ ಶಾಲೆಗಳಲ್ಲಿ ನಿಗದಿಪಡಿಸಿದ ಶಾಲಾ ಜಮೀನಿಗಿಂತಲೂ ಹೆಚ್ಚುವರಿ ಜಮೀನು ಸೌಲಭ್ಯ ಇದ್ದೂ, ಇಂತಹ ಶಾಲೆಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಕೊರತೆ ಇರುವುದು ಗಮನಕ್ಕೆ ಬಂದಿದೆ.<br><br>ಖಾಸಗಿ ಅನುದಾನಿತ ಶಾಲೆಗಳಲ್ಲಿನ ತರಗತಿಗಳಲ್ಲಿ ಶಿಕ್ಷಣ ಕಾಯ್ದೆಯನ್ವಯ ನಿಗದಿಪಡಿಸಿದ ವಿದ್ಯಾರ್ಥಿಗಳ ದಾಖಲಾತಿಗಿಂತ ಕಡಿಮೆ ಇದ್ದಲ್ಲಿ ಅಂತಹ ಶಾಲೆಗಳನ್ನು ಕಾರ್ಯಸಾಧುವಲ್ಲದ ಶಾಲೆಗಳೆಂದು ಪರಿಗಣಿಸಿ ಸದರಿ ಶಾಲೆಗಳ ಮಾನ್ಯತೆ ಮತ್ತು ಅನುದಾನವನ್ನು ಹಿಂಪಡೆಯಲಾಗುವುದು.<br><br>ಈ ರೀತಿ ಮಾನ್ಯತೆ / ಅನುದಾನ ಹಿಂಪಡೆದು ಮುಚ್ಚಲಾದ ಅನುದಾನಿತ ಶಾಲೆಗಳಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 709 ಪಿಜಿಸಿ 2017 ದಿನಾಂಕ: 07.03.2018ರಲ್ಲಿ ಆದೇಶಿಸಿರುವಂತೆ ಹೊಸ ಶಾಲೆಗಳ ನೋಂದಣಿ ಅನುಮತಿಗೆ ನಿಗದಿಪಡಿಸಿದ ನಿವೇಶನ / ಶಾಲಾ ಜಮೀನು /ಮೂಲಭೂತ ಸೌಲಭ್ಯ ಹೊಂದಿದ್ದಲ್ಲಿ ಹೊಸದಾಗಿ ನೋಂದಣಿ ಅನುಮತಿಗೆ ಅರ್ಜಿ ಸಲ್ಲಿಸಿ, ಅನುಮತಿ ಪಡೆದು ಪ್ರತ್ಯೇಕ ಮಾಧ್ಯಮ ಮತ್ತು ತರಗತಿಗಳನ್ನು ಪ್ರಾರಂಭಿಸಬಹುದು. |

| | | |
|---|---|---|
| ಉ) | ರಾಜ್ಯದ ಖಾಸಗಿ ಅನುದಾನಿತ ಶಾಲೆಗಳಲ್ಲಿ ಮಂಜೂರಾದ ಹುದ್ದೆಗಳ ಸಂಖ್ಯೆ ಎಷ್ಟು ಖಾಲಿಯಿರುವ ಹುದ್ದೆಗಳ ಸಂಖ್ಯೆ ಎಷ್ಟು; ಖಾಲಿಯಿರುವ ಹುದ್ದೆಗಳಿಗೆ ಶಿಕ್ಷಕರನ್ನು ನೇಮಕ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು? | ಖಾಸಗಿ ಅನುದಾನಿತ ಪ್ರೌಢಶಾಲೆ/ಪ್ರಾಥಮಿಕ ಶಾಲೆಗಳ ಮಂಜೂರಾದ, ಕರ್ತವ್ಯ ನಿರ್ವಹಿಸುತ್ತಿರುವ ಹಾಗೂ ಖಾಲಿಹುದ್ದೆ ಮಾಹಿತಿ. |

| ವಿವರ | ಪ್ರಾಥಮಿಕ | ಪ್ರೌಢ |
|---|---|---|
| ಮಂಜೂರಾದ ಹುದ್ದೆ | 15623 | 34425 |
| ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆ | 10747 | 24491 |
| ಖಾಲಿ ಹುದ್ದೆ | 4876 | 9934 |

***ಪ್ರೌಢ ಶಿಕ್ಷಣ ವಿಭಾಗ:***

ಸರ್ಕಾರಿ ಆದೇಶ ಸಂಖ್ಯೆ:ಇಪಿ 14 ಎಸ್‌ಇಪಿ 2017 ದಿನಾಂಕ:25-09-2018 ರನ್ವಯ ದಿನಾಂಕ:31-12-2015 ರೊಳಗೆ ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ವಿವಿದ ಕಾರಣಗಳಿಂದ ತೆರವಾದ ಭೋದಕ ಖಾಲಿ ಹುದ್ದೆಗಳನ್ನು ಭರ್ತಿಸಲು ಅನುಮತಿಸಿ ನೇಮಕಾತಿ ಅನುದಾಕ್ಕೊಳಪಡಿಸಲಾಗುತ್ತಿದೆ.

ತದನಂತರ ಸರ್ಕಾರಿ ಆದೇಶ ಸಂಖ್ಯೆ:ಇಪಿ 396 ಎಸ್‌ಇಎಸ್ 2021, ದಿನಾಂಕ:07-08-2024ರಲ್ಲಿ 01-01-2016 ರಿಂದ 31-12-2020 ರವರೆಗೆ ರಾಜ್ಯದ ಅನುದಾನಿತ ಪ್ರೌಢಶಾಲೆ ಮತ್ತು ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ವಿವಿದ ಕಾರಣಗಳಿಂದ ಖಾಲಿಯಾದ ಬೋದಕ ಹುದ್ದೆಗಳ ನೇಮಕಾತಿಗೆ ಅನುಮತಿ ನೀಡಲಾಗಿರುತ್ತದೆ

ಪ್ರಸ್ತುತ ಸರ್ಕಾರದ ಪತ್ರ ಸಂಖ್ಯೆ: ಸಿಆಸುಇ 388 ಸೇನೇನಿ 2024 ದಿನಾಂಕ:25-11-2024 ರನ್ವಯ ರಾಜ್ಯ ಸಿವಿಲ್ ಸೇವೆಗಳಲ್ಲಿನ ನೇಮಕಾತಿಗಳಲ್ಲಿ ಮೀಸಲಾತಿ ಅನ್ವಯವಾಗುವ ವೃಂದಗಳಲ್ಲಿನ ಹುದ್ದೆಗಳಿಗೆ ನೇರನೇಮಕಾತಿ ಮಾಡಲು ಅಧಿಸೂಚನೆಗಳನ್ನು ಹೊರಡಿಸುವಂತಿಲ್ಲ ಎಂದು ಸೂಚಿಸಲಾಗಿದೆ.

ಸದರಿ ಅಧಿಸೂಚನೆಯನ್ವಯ ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿನ ಬೋಧಕ ವರ್ಗದ ಹುದ್ದೆ ಭರ್ತಿ / ನೇಮಕಾತಿ ಅನುಮೋದನೆಯನ್ನು ಸ್ಥಗಿತಗೊಳಿಸಲಾಗಿರುತ್ತದೆ.

***ಪ್ರಾಥಮಿಕ ಶಿಕ್ಷಣ ವಿಭಾಗ:***

ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ 267 ಪಿಎಂಸಿ 2007, ದಿ:12.10.2007ರನ್ವಯ ಅನುದಾನಿತ ಪ್ರಾಥಮಿಕ ಶಾಲೆಗಳಲ್ಲಿನ ಖಾಲಿ ಹುದ್ದೆಗಳನ್ನು ಹೆಚ್ಚುವರಿ ಶಿಕ್ಷಕರಿಂದ ಮಾತ್ರ ತುಂಬಿಕೊಳ್ಳಬೇಕಾಗಿರುವುದರಿಂದ ಪ್ರಸ್ತುತ ಅನುದಾನಿತ ಪ್ರಾಥಮಿಕ ಶಾಲೆಗಳ ಖಾಲಿ ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿ ಮಾಡಲಾಗುತ್ತಿಲ್ಲ.

**ಸಂಖ್ಯೆ:** ಇಪಿ 412 ಪಿಜಿಸಿ 2024

**(ಎಸ್.ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು